ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಕರ್ನಾಟಕ ವಿಧಾನ ಸಭೆ ಅಧಿವೇಶನ

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ    ದಿನಾಂಕ : DATE : 05/03/2020

# ಆರೋಗ್ಯ, ಶಿಕ್ಷಣ ವಲಯ ರಾಷ್ಟ್ರೀಕರಣ ಕುರಿತು ಚರ್ಚೆ

ಉವಾ 5/3/20



ವಿಧಾನ ಪರಿಷತ್ ಕಲಾಪದಲ್ಲಿ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ವಿಧಾನಸಭೆ: ಶಿಕ್ಷಣ ಹಾಗೂ ಆರೋಗ್ಯ ವಲಯ ರಾಷ್ಟ್ರೀಕರಣ ಮಾಡುವ ಬಗ್ಗೆ ಪಕ್ಷಾತೀತವಾಗಿ ಸದನದಲ್ಲಿ ಗಂಭೀರ ಚರ್ಚೆ ನಡೆಯಿತು.

ಸಂವಿಧಾನದ ಕುರಿತು ಮಾಜಿ ಸ್ಪೀಕರ್ ರಮೇಶ್ ಕುಮಾರ್ ಮಾತನಾಡುವಾಗ ಶಿಕ್ಷಣ ಮತ್ತು ಆರೋಗ್ಯ ವ್ಯಾಪಾರೀಕರಣ ಆಗಿದೆ. ಶಿಕ್ಷಣ ಮತ್ತು ಆರೋಗ್ಯ ಉಚಿತವಾಗಿ ಕೊಡದ ಸ್ಥಿತಿಯಲ್ಲಿ ನಾವಿದ್ದೇವೆ. ಇದು ನೋವಿನ ಸಂಗತಿ, ನಾನು ಆರೋಗ್ಯ ಸಚಿವನಾಗಿದ್ದಾಗಲೂ ನಿರ್ಧಾರ ಕೈಗೊಳ್ಳದ ಸ್ಥಿತಿಯಲ್ಲಿದ್ದೆ ಎಂದು ಹೇಳಿದರು.

ಇದಕ್ಕೆ ಬಿಜೆಪಿಯ ಅರವಿಂದ ಲಿಂಬಾವಳಿ ಅವರು ಧ್ವನಿಗೂಡಿಸಿ, ರಮೇಶ್‌ಕುಮಾರ್ ಅವರು ಪ್ರಸ್ತಾಪಿಸಿರುವ ವಿಚಾರ ಅತ್ಯಂತ ಮಹತ್ವದ್ದಾಗಿದೆ. ಈ ಬಗ್ಗೆ ನಾವೆಲ್ಲರೂ ಯೋಚಿಸಬೇಕಾಗಿದೆ ಎಂದು ತಿಳಿಸಿದರು. ಜೆಡಿಎಸ್‌ನ ಎ.ಟಿ.ರಾಮಸ್ವಾಮಿ, ಶಿವಲಿಂಗೇಗೌಡ ಅವರು ಇದಕ್ಕೆ ಧ್ವನಿಗೂಡಿಸಿದರು.

ಶಿವಲಿಂಗೇಗೌಡರು ಮಾತನಾಡಿ, ಶಿಕ್ಷಣ ಮತ್ತು ಆರೋಗ್ಯ ಇನ್ನೂ ವ್ಯಾಪಾರೀಕರಣವಾಗಿಲ್ಲವೇ? ಈಗಾಗಲೇ ಅದು ವ್ಯಾಪಾರವೇ ಆಗಿಬಿಟ್ಟಿದೆ. ರಮೇಶ್‌ಕುಮಾರ್ ಅವರು ಸಚಿವರಾಗಿದ್ದಾಗ ಬಿಗಿ ಕ್ರಮ ಕೈಗೊಂಡಿದ್ದರು ಎಂದು ಹೇಳಿದರು.

ಶಿಕ್ಷಣ ಮತ್ತು ಆರೋಗ್ಯ ರಾಷ್ಟ್ರೀಕರಣ ಆಗಬೇಕು. ಇಂದು ಗ್ರಾಮೀಣ ಭಾಗದಲ್ಲಿ ಒಬ್ಬ ವೈದ್ಯರು ಬರುವುದಿಲ್ಲ, ಹೀಗೇ ಇದ್ದರೆ ಜನತೆ ದಂಗೆ ಏಳುತ್ತಾರೆ ಎಂದು ತಿಳಿಸಿದರು.

ಸದನದಲ್ಲಿ ಈ ಬಗ್ಗೆ ವಿಶೇಷ ಚರ್ಚೆ ನಡೆಸಿ ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಗಳನ್ನು ರಾಷ್ಟ್ರೀಕರಣ ಮಾಡುವ ಸಂಬಂಧ ಗಟ್ಟಿ ನಿರ್ಧಾರ ಕೈಗೊಳ್ಳಿ. ನಾವೆಲ್ಲರೂ ಬೆಂಬಲಿಸುತ್ತೇವೆ ಎಂದು ಹೇಳಿದರು.

## ಫೇಸ್ ವ್ಯಾಲ್ಯೂ, ಕೇಸ್ ವ್ಯಾಲ್ಯೂ

ಬಡವರು ತಮ್ಮ ಪ್ರಕರಣ ವಾದಿಸಲು ವಕೀಲರನ್ನು ನಿಯೋಜಿಸಿಕೊಳ್ಳಲು ಶಕ್ತಿ ಇಲ್ಲದ ಸಂದರ್ಭದಲ್ಲಿ ಸರ್ಕಾರವೇ ಕಾನೂನು ನೆರವು ನೀಡುವ ಬಗ್ಗೆ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ.ಮಾಧುಸ್ವಾಮಿ ಚರ್ಚೆ ಸಂದರ್ಭದಲ್ಲಿ ಪ್ರಸ್ತಾಪಿಸಿದಾಗ ಇದಕ್ಕೆ ಬಿಜೆಪಿಯವರೇ ಆದ ಸಚಿವ ಸಿ.ಟಿ.ರವಿ ಎದ್ದು ನಿಂತು, ನೀವು ಕೊಡುವ ಲೀಗಲ್ ನೆರವು ಪಡೆದರೆ ಯಾರೂ ಕೇಸ್ ಗೆಲ್ಲುವುದೇ ಸಾಧ್ಯವಿಲ್ಲ, ನ್ಯಾಯಾಲಯಗಳಲ್ಲಿ ಫೇಸ್‌ವ್ಯಾಲ್ಯೂ ಜಾಸ್ತಿ. ಹಿರಿಯ ವಕೀಲರು ವಾದ ಮಾಡಲು ಎದ್ದುನಿಂತರೆ ನಿಮ್ಮ ವಕೀಲರು ಮಾತನಾಡುವುದೂ ಇಲ್ಲ, ನ್ಯಾಯಾಲಯದಲ್ಲಿ ನ್ಯಾಯದೇವತೆಗೆ ಕಟ್ಟಿರುವ ಕಪ್ಪು ಪಟ್ಟಿ ನ್ಯಾಯಾಧೀಶರಿಗೆ ಕಟ್ಟಬೇಕಿದೆ. ಆಗ ಫೇಸ್‌ವ್ಯಾಲ್ಯೂ ಹೋಗಿ ಕೇಸ್‌ಗೆ ವ್ಯಾಲ್ಯೂ ಬರುತ್ತದೆ ಎಂದು ಹೇಳಿದರು. ಇದೇ ಸಂದರ್ಭದಲ್ಲಿ ನ್ಯಾಯಾಲಯಗಳ ತೀರ್ಪು, ನ್ಯಾಯದಾನ ಕುರಿತು ಚರ್ಚೆಯೂ ನಡೆಯಿತು.